ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 4, Jan-Feb 2020, 48-55
©*IIMRD*, Mysuru
IIMRD JOURNALS
www.iimrd.com

# ಕೊಪ್ಪಳ ಜಿಲ್ಲೆಯ ಭಾವೈಕ್ಯತೆಯ ತಾಣವಾದ ಕುದರಿಮೋತಿ ಮೊಹರಂ ಆಚರಣೆ ಮತ್ತು ವೈಶಿಷ್ಟ್ಯತೆಗಳು

**ಡಾ. ಪ್ರಕಾಶ ಬಳ್ಳಾರಿ[1]**

**ಪೀಠಿಕೆ**

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿಗೆ ಸೇರುವ ಗ್ರಾಮ ಕುದರಿಮೋತಿ. ಮೊಹರಂ ಹಬ್ಬದ ಸಮಯದಲ್ಲಿ ಜಾತ್ರೆಯನ್ನು ನೆನಪಿಗೆ ತರುವಷ್ಟು ಜನ ಸೇರಿ ಭಾವೈಕ್ಯತೆಯಿಂದ ಮೊಹರಂ ಹಬ್ಬವನ್ನು ಆಚರಿಸುತ್ತಾರೆ. ಇದಕ್ಕೆ ಅಲಾಯಿ ಹಬ್ಬ, ಅಲೆ ಹಬ್ಬ, ಹಲೆ ಹಬ್ಬ ಎಂದೂ ಕರೆಯುತ್ತಾರೆ. ಮುಸ್ಲಿಂ ಜನಾಂಗ ಇರದ ಊರಿನಲ್ಲಿಯೂ ಸಹ ಮೊಹರಂ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮಾಂತರದಲ್ಲಿ ಅಲ್ಲಾಸಾಬನ ಹಬ್ಬ, ಶರಣರ ಹಬ್ಬ ಎಂತಲೂ ಕರೆಯುತ್ತಾರೆ. ಈ ಹಬ್ಬವು ಕುದರಿಮೋತಿ ಅಲ್ಲಾಸಾಬನ ಹಬ್ಬವು ಹೌದು. ಈ ಮೊಹರಂ ಹಬ್ಬವನ್ನು ಕುದರಿಮೋತಿಯ ಜಾತ್ರೆ ಎಂದರೂ ತಪ್ಪಾಗಲಿಕ್ಕಿಲ್ಲ. ಕೊಪ್ಪಳ ಜಿಲ್ಲೆಯಲ್ಲಿ ಕುದರಿಮೋತಿ ಗ್ರಾಮವು ಸರ್ವಜನಾಂಗದ ಭಾವೈಕ್ಯತೆಯ ತಾಣವಾಗಿದೆ.

ಕೊಪ್ಪಳದಿಂದ ಸುಮಾರು 26 ಕಿ.ಮೀ ದೂರದಲ್ಲಿರುವ ಕುದರಿಮೋತಿ ಗ್ರಾಮವು ಕೊಪ್ಪಳ–ಕುಷ್ಟಗಿ ಮೂಲಕ ಹಾದು ಹೋಗುವ ರಾಜ್ಯದ ಹೆದ್ದಾರಿಗೆ ಅಂಟಿಕೊಂಡಿದೆ. ಕೊಪ್ಪಳದಿಂದ ಕಿನ್ನಾಳ ಮಾರ್ಗವಾಗಿಯೂ ಭೈರನಾಯಕನಹಳ್ಳಿಯ ತಿರುವಿನಿಂದಲೂ ಕುದರಿಮೋತಿಗೆ ರಸ್ತೆ ಸಂಚಾರವು ಇದೆ. ಇದು ಹಿಂದೂ ಮುಸ್ಲಿಂ ಭಾವೈಕ್ಯತೆಯ ತಾಣವಾಗಿದೆ. ಇಲ್ಲಿನ ಜನ ಯಾವುದೇ ಭೇದಭಾವವಿಲ್ಲದೇ ಪ್ರೀತಿ ಪ್ರೇಮ ಸಹಕಾರದಿಂದ ಸೌಹಾರ್ದಯುತವಾಗಿ ಬಾಳುತ್ತಿದ್ದಾರೆ. ಕುದರಿಮೋತಿ ಗ್ರಾಮವು ಭೈರನಾಯಕನಹಳ್ಳಿ, ವಟ್‌ಪರವಿ, ನೆಲಜೇರಿ, ಚೆನ್ನಿಹಾಳ ಗ್ರಾಮಗಳ ಮಂಡಲ ಪಂಚಾಯತಿಯ ಕೇಂದ್ರಸ್ಥಾನವಾಗಿದೆ.

ಹುಸೇನಬಾಷಾ ದೇವರಿಗೆ ಶರಣಾದ ಜನಸಮೂಹ ತಮ್ಮ ನಿರ್ಮಲ ಮನಸ್ಸಿನಿಂದ ದರ್ಗಾಕ್ಕೆ ಜಾಗ, ಉತ್ಸವ ನೆಡೆಸಲು ವಿಸ್ತಾರವಾದ ಬಯಲಿಗೆ ಪ್ರಯತ್ನ ನಡೆಸಿದರು. ಅಂತೆಯೇ ಕಂದನಕೆರಿ ದರ್ಗಾವು ಮೊಹರಂ ಆಚರಣೆಯ ಸ್ಥಳವಾಯಿತು. ಈ ಹಿಂದೆ ಇದು ಹಸುಗೂಸುಗಳ ಸ್ಮಶಾನವಾಗಿತ್ತು. ಇಂದು ಇದೇ ಸ್ಥಳ ಮೊಹರಂನ ಪ್ರಸಿದ್ಧ ಹಜರತ್ ಹುಸೇನಿ ಆಲಂರ ಕಂದನಕೆರಿ ದರ್ಗಾ ಸ್ಥಳವಾಗಿ ಹೊರ ಹೊಮ್ಮಿದೆ.

ಕುದರಿಮೋತಿ ಗ್ರಾಮದ ಬ್ರಾಹ್ಮಣರಾದ ಸೋಮರಾಯರ ತಂದೆ ಬಾಳಾಜಿರಾವ್ ಮಸೀದಿ ಕಟ್ಟಿಸಿದ ಇತಿಹಾಸವಿದೆ. ದೇವರಕೋಣೆಯನ್ನು ಇದೇ ಊರಿನ ಜಂಬಯ್ಯಸ್ವಾಮಿ ವಣಗೇರಿ ಇವರು

[1] *ಅತಿಥಿ ಉಪನ್ಯಾಸಕರು, ಅತ್ತಾರ ಗಲ್ಲಿ, ಜವಾಹರ ರಸ್ತೆ, ಕೊಪ್ಪಳ*

ಕಟ್ಟಿಸಿಕೊಟ್ಟಿದ್ದಾರೆ. ಹಿಂದೂ–ಮುಸ್ಲಿಂರು ಸೇರಿ ಮೊಹರಂ ಆಚರಿಸುವ ಈ ಪದ್ಧತಿ ಕುದರಿಮೋತಿಯಲ್ಲಿ ಸುಮಾರು ಎರಡು ಶತಮಾನಗಳಷ್ಟು ಹಿಂದಿನಿಂದ ನಡೆದು ಬಂದಿದೆ. ಈ ದರ್ಗಾದ ಮುಂಭಾಗದಲ್ಲಿ ಪೂರ್ವಜರಾದ ಷಾ್ಯ ಪಾಪಾಷಾ್ಯವಲಿ ಮತ್ತು ಹುಸೇನಿಮಾ ದಂಪತಿಗಳ ಸಮಾಧಿಗಳಿವೆ. ಇವರು ಮೂಲತಃ ಆಂದ್ರಪ್ರದೇಶದ ಕರ್ನೂಲು ಜಿಲ್ಲೆಯ ಆಧೋನಿ ತಾಲೂಕಿನ ಆಲ್ವಿ ಗ್ರಾಮದವರು. ಷಾ್ಯ ಗರೀಬ ನವಾಜ ಎಂಬುವವರು ಇವರ ಪುತ್ರರು. ಇಲ್ಲಿ ಸುಮಾರು ಎರಡು ಶತಮಾನಗಳಷ್ಟು ಹಿಂದಿನಿಂದಲೂ ಮೊಹರಂ ಹಬ್ಬವನ್ನು ಆಚರಿಸುತ್ತಾ ಬಂದಿರುವ ಇತಿಹಾಸವಿದೆ. ಈಗಲೂ ಸಹ ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ ಎಂದು ಷಾ್ಯ ಪಾಪಾಷಾ್ಯ ವಲಿ ಇವರ ವಂಶಸ್ಥರಾದ ದಿ.ಖಾಜಾಮೈನುದ್ಧೀನ್ ಮಕಾನ್ದಾರ ಸಂಶೋಧನೆ ಕ್ಷೇತ್ರಕಾರ್ಯ ಸಮಯದಲ್ಲಿ ಮಾಹಿತಿ ಒದಗಿಸಿದ್ದರು.

ಪ್ರತಿ ಎರಡು ವರ್ಷಗಳಿಗೊಮ್ಮೆ ಹಗಲುವೇಷಗಾರು, ಸುಡುಗಾಡು ಸಿದ್ದರು, ಸಿಂಧೊಳ್ಳರು, ಡಂಬರು, ಗೊಂಧಳಿಗರು, ಮೋಡಿಕಾರರು, ಬುಡಬುಡಕಿಯವರು, ಹಾವಾಡಿಗರು, ಜಾತಿಗಾರರು ಭಾಗವಹಿಸಿ ಹಜರತ್ ಹುಸೇನಿ ಆಲಂರ ದರ್ಶನಾಶಿರ್ವಾದ ಪಡೆದುಕೊಂಡು ಪುನೀತರಾಗುತ್ತಾರೆ. ಇದೇ ಸಂದರ್ಭದಲ್ಲಿ ಅಲೆಮಾರಿಗಳು ತಮ್ಮ ತಮ್ಮ ವೈವಾಹಿಕ ಸಂಬಂಧಗಳನ್ನು ಕುದುರಿಸುತ್ತಾರೆ. ಅಲ್ಲದೇ ಮನೆ ಜಗಳ, ತಂಟೆ, ತಕರಾರುಗಳು ಕೂಡಾ ಪರಿಹಾರವಾಗುತ್ತವೆ. ತಪ್ಪಿತಸ್ಥರಿಗೆ ದಂಡ ಶಿಕ್ಷೆ ಎಲ್ಲವೂ ಜರುಗುತ್ತವೆ. ಊರ ಹೊರಗಿನ ಹತ್ತಾರು ಎಕರೆ ಹೊಲಗಳಲ್ಲಿ ಬೀಡು ಬಿಟ್ಟು ತಮ್ಮೆಲ್ಲ ನ್ಯಾಯಗಳನ್ನು ಇತ್ಯರ್ಥ ಮಾಡಿಕೊಂಡು ಹೋಗುವ ಸ್ಥಳ ಕುದರಿಮೋತಿ. ವ್ಯಾಜ್ಯಗಳು ತಮ್ಮ ತಮ್ಮಲ್ಲಿ ಬಗೆಹರಿಯದಿದ್ದಲ್ಲಿ ಹುಸೇನಭಾಷಾ ದರ್ಗಾದ ಕಟ್ಟೆಯಲ್ಲಿ ಅಂತಿಮ ತೀರ್ಪು ನಡೆಯುತ್ತದೆ.

ಮೊಹರಂ ಆಚರಣೆಯ ಎಂಟನೆಯ ದಿನವಾದ ಸಂದಲ್ ರಾತ್ರಿ, ಒಂಬತ್ತನೆಯ ದಿನವಾದ ಖತಲ್ ರಾತ್ರಿ ಹಾಗೂ ಹತ್ತನೆಯ ದಿನವಾದ ಶಹದತ್ ಈ ಮೂರು ದಿನಗಳಂದು ಹೊರ ಜಿಲ್ಲೆಗಳಿಂದ, ಹೊರ ರಾಜ್ಯಗಳಿಂದ ಸಹಸ್ರಾರು ಜನರು ಮೊಹರಂ ಹಬ್ಬ ಆಚರಿಸಲೆಂದೇ ಕುದರಿಮೋತಿಗೆ ಬರುತ್ತಾರೆ. ಈ ಮೂರು ದಿನಗಳಂದು ಕುದರಿಮೋತಿಯಲ್ಲಿ ಯಾವ ಮನೆಯ ಬಾಗಿಲುಗಳನ್ನು ಮುಚ್ಚುವದಿಲ್ಲ. ಯಾತ್ರಿಕರು ಯಾರೇ ಬರಲಿ ಲಗೇಜುಗಳನ್ನು ಯಾರ ಮನೆಯಲ್ಲಾದರೂ ಇಡಬಹುದು, ತಂಗಬಹುದು. ಯಾರ ಜಾತಿ ಕುಲವನ್ನು ಪ್ರಶ್ನಿಸುವದಿಲ್ಲ. ಸೌಹಾರ್ಧಯುತವಾಗಿ ಆಶ್ರಯ ನೀಡಿ ಗೌರವಿಸುವದು ಕುದರಿಮೋತಿ ಗ್ರಾಮದ ಸತ್ಸಂಪ್ರದಾಯವಾಗಿದೆ. ಈ ಮೊಹರಂ ಹಬ್ಬಕ್ಕೆ ಗುಜರಾತ್, ದೆಹಲಿ, ಬಿಹಾರ್, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕೇರಳ ಅಲ್ಲದೇ ಕರ್ನಾಟಕದ ವಿವಿಧ ಭಾಗಗಳಿಂದ ಭಕ್ತ ಜನರು ಆಗಮಿಸುತ್ತಾರೆ.

ಕುದರಿಮೋತಿ ಗ್ರಾಮದಲ್ಲಿ ಕಂದನಕೇರಿ ದರ್ಗಾ, ನಡುಕಲ್ ಮಸೂತಿ, ಕಡೆ ಮಸೂತಿ ಇವೆಲ್ಲವುಗಳು ದೇವರುಗಳನ್ನು ಕೂರಿಸುವ ಪ್ರಮುಖ ಸ್ಥಳಗಳು. ಇವುಗಳಲ್ಲಿ ಕಂದನಕೇರಿ ದರ್ಗಾದ ಮಸೀದಿಯಲ್ಲಿ ಕರ್ಬಾಲದಲ್ಲಿ ನಡೆದ ಧರ್ಮಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದ ಹಜರತ್ ಹುಸೇನಿ ಆಲಂ ದೇವರನ್ನು ಪ್ರತಿಷ್ಠಾಪಿಸುತ್ತಾರೆ. ಜೊತೆಗೆ ಲಾಲ್ ಸಾಬ್ (ಚಾಂದ್‌ಪೀರ್) ಮತ್ತು ಕುಟುಂಬ ವರ್ಗದವರ ದೇವರುಗಳನ್ನು ಕೂಡಿಸುತ್ತಾರೆ. ಇಲ್ಲಿನ ಮೊಹರಂ ಆಚರಣೆಯು ಶತಮಾನಗಳಿಂದಲೂ ತನ್ನ ವೈಶಿಷ್ಟ್ಯ

ಮತ್ತು ಗುರುತರವಾದ ಪರಂಪರೆಯನ್ನು ಕನ್ನಡನಾಡಿನಲ್ಲಿ ಸಾರುತ್ತಾ ಅಸಂಖ್ಯಾತ ಭಕ್ತಾಧಿಗಳ ಅಭಿಮಾನ, ಭಕ್ತಿ ದ್ಯೋತಕವಾಗಿದೆ. ಕುದರಿಮೋತಿ ಗ್ರಾಮದ ಎಲ್ಲ ಕೋಮಿನವರು ಐಕ್ಯತೆಯಿಂದ, ಅನನ್ಯ ಭಕ್ತಿಯಿಂದ ಅತ್ಯಂತ ಸಂಭ್ರಮದಿಂದ ಮೊಹರಂ ಹಬ್ಬವನ್ನು ಆಚರಿಸುತ್ತಾ ಬಂದಿದ್ದು ಮೊಹರಂ ಆಚರಣೆಯ ಮೂಲಕ ಗತಿಸಿ ಹೋದ ದಂತ ಕತೆಯ ಇತಿಹಾಸವನ್ನು ಮತ್ತೊಮ್ಮೆ ಸಾರುತ್ತಿದೆ.

ಈ ಕುದರಿಮೋತಿ ಮೊಹರಂ ಆಚರಣೆಯ  ಇನ್ನೊಂದು ಪ್ರಮುಖ ಅಂಶವೇನೆಂದರೆ ಪ್ರತಿ ಎರಡು ವರ್ಷಗಳಿಗೊಮ್ಮೆ ದೇಶದ ನಾನಾ ಮೂಲೆಗಳಿಂದ ಅಲೆಮಾರಿ ಜನಾಂಗದ ಹಗಲುವೇಷಗಾರು, ಸುಡುಗಾಡು ಸಿದ್ದರು, ಸಿಂಧೊಳ್ಳರು, ಡಂಬರು, ಗೊಂಧಳಿಗರು, ಮೋಡಿಕಾರರು, ಬುಡಬುಡಕಿಯವರು, ಹಾವಾಡಿಗರು, ಜಾತಿಗಾರರು ಮೊದಲಾದವರೆಲ್ಲಾ ಮುಖಾಮುಖಿಯಾಗಿ ಒಂದೆಡೆಗೆ ಕೂಡುತ್ತಾರೆ.

ಪ್ರತಿ ಎರಡು ವರ್ಷಗಳಿಗೊಮ್ಮೆ ದೇಶದ ಮೂಲೆ ಮೂಲೆಗಳಿಂದ ಬರುವ ಇವರ ಬದುಕು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೂ ಅಲೆದಾಟ ತಿರುಗಾಟದಲ್ಲಿರುತ್ತದೆ. ಸಾಮಾನ್ಯವಾಗಿ ಇವರೆಲ್ಲರೂ ಹಿಂದೂಗಳಾಗಿದ್ದು ಭಾವೈಕ್ಯತೆಯಿಂದ ಒಂದೆಡೆ ಸೇರಿ ಕುದರಿಮೋತಿಯಲ್ಲಿ ಮೊಹರಂ ಆಚರಿಸಿ, ಹಬ್ಬದ ನಂತರ ಮತ್ತೆ ಅಲೆಮಾರಿ ಬದುಕಿಗೆ ಸಾಗುತ್ತಾರೆ.

ಇಲ್ಲಿ ಜಾತಿ ಮತ ಭೇದಗಳಿಲ್ಲದೇ ಸುಮಾರು ಎರಡು ಶತಮಾನಗಳಿಂದಲೂ ಮೊಹರಂ ಆಚರಿಸಲಾಗುತ್ತಿದೆ. ಇದು ಊರಿನ ಜನರಿಗೆಲ್ಲರಿಗೂ ಉತ್ಸವವಾಗಿದೆ. ಇಲ್ಲಿನ ಜನರು ಮೂರು ದಿನಗಳ ಕಾಲ ಊರಿಗೆ ಬಂದವರನ್ನು ಉಪಚರಿಸುತ್ತಾರೆ. ಸಕ್ಕರೆ, ಮಾದಲಿ,ಬೆಲ್ಲದ ಮಾದಲಿ, ಚೊಂಗೆಯಂತಹ ಸಿಹಿ ತಿನಿಸುಗಳನ್ನು ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲೂ ತಯಾರಾಗುತ್ತದೆ.

ಹರಕೆ ಹೊತ್ತುಕೊಂಡ ಭಕ್ತರು, ವಲಸೆ ಹೋದಂಥವರು, ಮೊಹರಂ ಹಬ್ಬಕ್ಕೆ ಆಗಮಿಸುತ್ತಾರೆ. ತಮ್ಮ ತಮ್ಮ ನಂಬಿಕೆಯಂತೆಯೇ  ಹುಲಿಯ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಹೊರ ರಾಜ್ಯಗಳಿಂದಲೂ ಜನರು ತಮ್ಮ ಹರಕೆ ತೀರಿಸಲು ಹುಲಿ ವೇಷ ತೊಟ್ಟು ಭಿಕ್ಷೆ ಬೇಡುತ್ತಾರೆ. ಹಗಲುವೇಷಗಾರರು ತಮ್ಮ ಚಾಟಿಯಿಂದ ಜನರಿಗೆ ಮೃದುವಾಗಿ ಏಟು ಹೊಡೆದು ಗಮನ ಸೆಳೆಯುತ್ತಾರೆ.

ಎರಡು ವರ್ಷಗಳಿಗೊಮ್ಮೆ ಕುದರಿಮೋತಿಯಲ್ಲಿ ಮೊಹರಂ ಹಬ್ಬದ ಸಮಯದಲ್ಲಿ ಸಾವಿರಾರು ಡೇರೆಗಳು ಮೇಲೆದ್ದು ನಿಲ್ಲುತ್ತವೆ. ಕಡಿಮೆ ಎಂದರೂ 10 ರಿಂದ 15 ಸಾವಿರದಷ್ಟು ಜನರು ಬಂದು ಇಲ್ಲಿ ಕೆಲವು ದಿನ ಉಳಿಯುತ್ತಾರೆ. ಒಂದೊಂದು ಕುಟುಂಬಕ್ಕೆ ಒಂದು ಡೇರೆ. ಅಲ್ಲಿಯೇ ಅಡುಗೆ, ದಿನನಿತ್ಯದ ದಿನಚರಿ. ಇದಲ್ಲದೇ ಸುಮಾರು 1 ಸಾವಿರ ಡೇರೆಗಳಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳಿಂದ ಬಂದ ಜನರ ವಾಸವಾಗಿರುತ್ತದೆ. ಇದೇ ಸಮಯದಲ್ಲಿಯೇ ಈ ಅಲೆಮಾರಿ ಜನಾಂಗದ ಬಹುತೇಕ ಮದುವೆಗಳ ನಿಶ್ಚಿತಾರ್ಥ, ಲಗ್ನ, ನ್ಯಾಯ ತೀರ್ಮಾನ ಆಗುತ್ತವೆ. ತಮ್ಮದೇ ಪಂಚರ ನ್ಯಾಯ ತೀರ್ಮಾನಕ್ಕೆ ಈ ಜನಾಂಗದವರು ಬದ್ಧರಾಗಿರುತ್ತಾರಲ್ಲದೇ, ತಪ್ಪಿಗೆ ದಂಡ ವಿಧಿಸಲಾಗುತ್ತದೆ. ಆ ದಂಡದ ಹಣವನ್ನು ದರ್ಗಾಕ್ಕೆ ಕಾಣಿಕೆಯಾಗಿ ಸಲ್ಲಿಸಿ ಜನಾಂಗದ ಮತ್ತೆ ತಮ್ಮ ಅಲೆಮಾರಿ ಜೀವನಕ್ಕೆ ಮುಂದೆ ಹೋಗುತ್ತಾರೆ.

ಕುದರಿಮೋತಿ ದರ್ಗಾದ ವೈಶಿಷ್ಟ್ಯತೆ ಎಂದರೆ ಇಲ್ಲಿನ ದರ್ಗಾ ಕೇವಲ ಮುಸ್ಲಿಂ ಹಬ್ಬದಾಚರಣೆಯ ಸ್ಥಳವಾಗಿರದೇ, ನಾಗರ ಪಂಚಮಿ, ಮಹಾನವಮಿಗಳ ಆಚರಣೆಯೂ ನಡೆಯುತ್ತದೆ. ದರ್ಗಾವು ಸರ್ವಜನಾಂಗದ ಹಬ್ಬ, ಹರಿದಿನಗಳಿಗೆ, ಕಾರ್ಯಕ್ರಮಗಳಿಗೆ ಸ್ಥಳವಾಗಿರುವ ಭಾವೈಕ್ಯತೆಯ ವಿಶಿಷ್ಟ ತಾಣವಾಗಿದೆ.

ಕೊಪ್ಪಳ ಜಿಲ್ಲೆಯ ಮೊಹರಂ ಹಬ್ಬದ ಅನೇಕ ತಾಣಗಳಿಗೆ ಹೋಲಿಸಿದರೆ ಕುದರಿಮೋತಿ ಅಗ್ರಗಣ್ಯ ಸ್ಥಾನದಲ್ಲಿ ನಿಲ್ಲುತ್ತದೆ. ಇಲ್ಲಿನ ಮೊಹರಂ ಇತಿಹಾಸ, ಆಚರಣೆ ದೇಶದಲ್ಲಿ ಹೆಸರು ಪಡೆದಿದೆ.

**ಕುದರಿಮೋತಿ ಮೊಹರಂ ಆಚರಣೆಯ ಪೂರ್ವ ತಯಾರಿ ಮತ್ತು ವೈಶಿಷ್ಟ್ಯತೆಗಳು**

ಸಾಮಾನ್ಯವಾಗಿ ಮೊಹರಂ ಹಬ್ಬದ ಪೂರ್ವತಯಾರಿ ಕುದರಿಮೋತಿಯಲ್ಲಿ ಮೂರು ತಿಂಗಳ ಮೊದಲೇ ಸಡಗರ, ಸಂಭ್ರಮದಿಂದ ಆಚರಣೆ ಆರಂಭವಾಗುತ್ತದೆ. ರಂಜಾನ ತಿಂಗಳ ಅಮವಾಸ್ಯೆಯ ದಿನ ರಾತ್ರಿ ಊರಿನ ಗುರು–ಹಿರಿಯರು ದರ್ಗಾದಲ್ಲಿ ಸೇರಿಕೊಂಡು ದೇವರಿಗೆ ಸಕ್ಕರೆ ಓದಿಸಿ ಅನಂತರ ಹೆಜ್ಜೆ ಮೇಳಕ್ಕೆ ಚಾಲನೆ ನೀಡುತ್ತಾರೆ. ಅಲ್ಲಿಂದ ಮೂರು ತಿಂಗಳ ನಂತರ ಅಂದರೆ ರಂಜಾನ್, ಷವ್ವಾಲ್, ಜುಲ್‌ಖೈದ್ ಈ ಮೂರು ತಿಂಗಳದ ನಂತರದಲ್ಲಿ ಬರುವ ಜುಲ್‌ಹಜ್ (ಬಕ್ರೀದ್) ತಿಂಗಳ ಅಮವಾಸ್ಯೆಯ ಮಾರನೆಯ ದಿನ ಚಂದ್ರ ಕಾಣಿಸಿದ ಕೂಡಲೇ ದರ್ಗಾದ ಆವರಣದಲ್ಲಿ ಗುರು ಹಿರಿಯರ ಸಮ್ಮುಖದಲ್ಲಿ ಗುದ್ದಲಿಯನ್ನು ಹಾಕಲಾಗುತ್ತದೆ. ಗುದ್ದಲಿ ಹಾಕುವುದು ಎಂದರೆ ಅಲಾವಿ ಕುಣಿಯನ್ನು ತೆಗೆಯುವುದು. ಆ ಕುಣಿಯನ್ನು ತೆಗೆದ ಐದನೆಯ ದಿವಸ ಮಸೀದಿಯಲ್ಲಿ ಒಂದು ದೇವರನ್ನು ಕೂಡಿಸಲಾಗುತ್ತದೆ. ಈ ದೇವರಗೆ ಗ್ರಾಮಾಂತರ ಭಾಷೆಯಲ್ಲಿ 'ಹಿರೇದೇವರು ಎನ್ನುತ್ತಾರೆ' ಕೂಡಿಸುತ್ತಾರೆ. ಇವರೇ ಕರ್ಬಾಲಾದಲ್ಲಿ ನೆಡೆದ ಧರ್ಮಯುದ್ಧದಲ್ಲಿ ಹುತಾತ್ಮರಾದ ಹಜರತ್ ಹುಸೇನಿ ಆಲಂ. ನಂತರದ ಆರನೇ ದಿವಸ ಉಳಿದ 'ಮರಿದೇವರು'ಗಳನ್ನು ಹಾಗೂ ಏಳನೇ ದಿವಸ ಲಾಲ್‌ಸಾಬ್ (ಚಾಂದ್‌ಪೀರ್, ಚಂದಪ್ಪ ದೇವರನ್ನು) ಕೂಡಿಸುವುದು ವಾಡಿಕೆ. ಈ ಲಾಲ್‌ಸಾಬ್ (ಚಾಂದ್‌ಪೀರ್, ಚಂದಪ್ಪ) ದೇವರನ್ನು ಕೂಡಿಸಿದ ಮರು ದಿವಸವೇ ಏಳು ದಿನದ ಸವಾರಿ ಅಥವಾ ಚಂದಪ್ಪನ ಸವಾರಿ ಮೆರವಣಿಗೆ ಜರುಗುತ್ತದೆ.

**ಕಳ್ಳಳ್ಳಿಯಾಗುವುದು**

ಕೆಲವೊಂದು ಕಡೆಗಳಲ್ಲಿ ಕಳ್ಳಳ್ಳಿ ಎಂದೂ, ಇನ್ನು ಕೆಲವೆಡೆ ಅಚ್ಚಳ್ಳಿ, ಪಿಚ್ಚಳ್ಳಿ ಎಂದೂ ಕರೆಯಲಾಗುವ ಈ ವೇಷ ತೊಡುವ ಪದ್ಧತಿ ಮೊಹರಂ ಹಬ್ಬದ ಒಂದು ವಿಶಿಷ್ಟ ಆಚರಣಾ ಪದ್ಧತಿಗಳಲ್ಲೊಂದು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಾಗಿ ಈ ಪದ್ಧತಿ ಕಂಡುಬಂದರೂ, ಪಟ್ಟಣ, ನಗರ ಪ್ರದೇಶಗಳಲ್ಲಿಯೂ ಈ ಆಚರಣೆಯು ಜನರಿಂದ ಕಾಣೆಯಾಗಿಲ್ಲ. ಮನೆಯಲ್ಲಿನ ಆಂತರಿಕ ಸಮಸ್ಯೆಗಳ ಪರಿಹಾರಕ್ಕಾಗಿ, ಮಕ್ಕಳ ಆರೋಗ್ಯದ ಬೇಡಿಕೆಯಲ್ಲಿ ಸಂಕಷ್ಟ ಸ್ಥಿತಿಯಿಂದ ಪಾರಾಗುವ ಹರಕೆ ಹೊತ್ತುಕೊಂಡಂತಹ ಜನತೆ ಹೊತ್ತುಕೊಂಡ ಹರಕೆಯನ್ನು ತೀರಿಸಲು ಮೊಹರಂ ತಿಂಗಳಲ್ಲಿ ಅಂದರೆ ಮೊಹರಂ ಹಬ್ಬದ ಸಮಯದಲ್ಲಿ ಮನೆಯ ಸದಸ್ಯರನ್ನು ಕಳ್ಳಳ್ಳಿ ಮಾಡುತ್ತಾರೆ. ಅಂದರೆ ಹರಕೆ ತೀರಿಸುವ ಸಲುವಾಗಿ ಈಚಲ ಮರದ ಬರಲನ್ನು ತೆಗೆದುಕೊಂಡು, ತಮ್ಮ ತಲೆಯ ಅಳತೆಯನ್ನು ಒಂದು ಸಿಂಚಿಯನ್ನು ಎಣೆದು, ಅದಕ್ಕೆ ಕೆಲವು ಈಚಲ ಬರಲುಗಳನ್ನು ಚುಚ್ಚಿಕೊಂಡು, ಕಿರೀಟದಂತೆ ಮಾಡಿ,

ಬಣ್ಣದ ಹಾಳೆಗಳಿಂದ ಟೋಪಿಯನ್ನು ಸಿದ್ಧಪಡಿಸಿ ಹಾಕಿಕೊಳ್ಳುತ್ತಾರೆ. ಮೈತುಂಬಾ ಬಣ್ಣಗಳನ್ನು ಬಳಿದುಕೊಂಡು, ಕೈಯಲ್ಲೊಂದು ವಸ್ತ್ರದ ಸುರುಳಿ ಹಿಡಿದುಕೊಂಡು, ಕುಣಿಯುತ್ತಾ ಭಿಕ್ಷೆಗೆ ಬರುತ್ತಾರೆ. ಆ ಮೂಲಕ ತಾವು ಅಂದುಕೊಂಡಂತೆ ಹರಕೆಯನ್ನು ತೀರಿಸಿ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾರೆ.

**ಫಕೀರನಾಗುವುದು**

ಫಕೀರನಾಗುವುದು ಮೊಹರಂ ಹಬ್ಬದ ಸಮಯದಲ್ಲಿ ನಡೆದುಕೊಂಡು ಬರುವಂತಹ ಒಂದು ವಿಶಿಷ್ಟ ಸಂಪ್ರದಾಯ. ಈ ಸಂಪ್ರದಾಯದಲ್ಲಿಯೂ ಹಿಂದೂ–ಮುಸ್ಲಿಂರೆಂಬ ಭೇಧ–ಭಾವವಿಲ್ಲದೇ, ಹರಕೆ ಹೊತ್ತುಕೊಂಡವರು ಫಕೀರರಾಗುತ್ತಾರೆ. ಆ ಮೂಲಕ ತಾವು ಅಂದುಕೊಂಡ ಇಷ್ಟಾರ್ಥ ಪೂರೈಕೆಗಾಗಿ ದೇವರಿಗೆ ಸೇವೆ ಸಲ್ಲಿಸುತ್ತಾರೆ. ಫಕೀರರಾಗುವವರಲ್ಲಿ ಕೆಲವರು ಐದು ದಿನಗಳವರೆಗೆ, ಇನ್ನು ಕೆಲವು ಮೂರು ದಿನಗಳವರೆಗೆ ಫಕೀರರಾಗುವ ವಾಡಿಕೆ ಇದೆ. ಸಾಮಾನ್ಯವಾಗಿ ಮುಸ್ಲಿಮರು ಹಿರಿಯ ದೇವರು ಪ್ರತಿಷ್ಠಾಪನೆಯ ದಿನವೇ ಫಕೀರರಾದರೆ, ಹಿಂದೂ ಭಕ್ತರು ಫಕೀರರಾಗುವುದು ಸಂದಲ್ ರಾತ್ರಿಯಂದು. ಗ್ರಾಮಾಂತರ ಭಾಷೆಯ ಈ ಸಂದಾಲ್ ರಾತ್ರಿ ಅಥವಾ ಸಂದಲ್ ರಾತ್ರಿಗೆ ಉರ್ದು ಅಥವಾ ಹಿಂದಿಯಲ್ಲಿ ಸಂದಲ್ ಕೀ ರಾತ್ ಎಂದು ಕರೆಯುತ್ತಾರೆ. ಅಂದರೆ ಮೊಹರಂ ತಿಂಗಳ ಎಂಟನೆಯ ದಿನವನ್ನು ಸಂದಲ್ ರಾತ್ರಿ (ಗಂಧದ ರಾತ್ರಿ) ಎಂದು ಕರೆಯುವ ವಾಡಿಕೆ ಇದೆ. ಹಿಂದೂ ಭಕ್ತರು ಸಾಮಾನ್ಯವಾಗಿ ಮೊಹರಂ ಹಬ್ಬದ ದಿನವೇ ಹೊಸ ಬಟ್ಟೆ ಧರಿಸಿದರೆ, ಮುಸ್ಲಿಮರು ಸಾಮಾನ್ಯವಾಗಿ ಮೊಹರಂ ಹಬ್ಬದ ಇಪ್ಪತ್ತು ದಿನದ ಮೊದಲು ಆಚರಿಸುವ ಬಕರೀದ್ ಹಬ್ಬದ ದಿನವೇ ಹೊಸ ಬಟ್ಟೆ ಧರಿಸುವ ಪದ್ಧತಿಯಿದೆ. ಸಾಮಾನ್ಯವಾಗಿ ಫಕೀರರಾಗುವುದು ಎಂದರೆ ಭಕ್ತರು ದೇವರಿಗೆ ಸಕ್ಕರೆ, ಕಾಣಿಕೆಯನ್ನು ಸಲ್ಲಿಸಿ, ದೇವರ ಸಮ್ಮುಖದಲ್ಲಿ ಕೈ ಲಾಡಿ (ಕೈಗೆ ಕಟ್ಟಿಕೊಳ್ಳುವ ಕೆಂಪು ಅಥವಾ ಕಪ್ಪು ಬಣ್ಣದ ಲಾಡಿ), ಕೊಳ್ಳಾಡಿ (ಕೊರಳಿಗೆ ಹಾಕಿಕೊಳ್ಳುವ ಲಾಡಿ) ಧರಿಸಿ ಅಂದುಕೊಂಡಷ್ಟು ದಿನ ಫಕೀರರಾಗಿ ಸೇವೆ ಸಲ್ಲಿಸುತ್ತಾರೆ. ಫಕೀರರಾದವರು ಆ ಸಮುದಯಲ್ಲಿ ಸುಳ್ಳು ಹೇಳಬಾರದು. ಬರಿಗಾಲಿನಲ್ಲಿಯೇ ಅಡ್ಡಾಡಬೇಕು. ಅಶ್ಲೀಲ ಪದಗಳನ್ನು ಬಳಸಬಾರದು. ಕಸಬರಿಗೆಯನ್ನು ಮುಟ್ಟಬಾರದು ಎಂಬ ಕರಾರುಗಳನ್ನು ಪಾಲಿಸಬೇಕಾಗುತ್ತದೆ.

**ಹುಲಿಯ ವೇಷ ತೊಟ್ಟು ಹುಲಿವೇಷಗಾರರಾಗುವುದು**

ಹುಲಿಯ ವೇಷ ತೊಡುವುದೂ ಸಹ ಕಳ್ಳಳ್ಳಿ ಅಥವಾ ಫಕೀರರಾಗುವ ಪದ್ಧತಿ ಇದ್ದಂತೆ. ಜನರು ತಮ್ಮ ಇಷ್ಟಾರ್ಥಗಳ ಪೂರೈಕೆಗಾಗಿ ತಮ್ಮ ಮಕ್ಕಳನ್ನೋ ಅಥವಾ ಮನೆಯ ಸದಸ್ಯರನ್ನೋ ಹುಲಿಯ ವೇಷ ತೊಡಿಸಿ ಆ ಮೂಲಕ ಭಕ್ತಿಯನ್ನು ಮೆರೆಯುತ್ತಾರೆ. ಹರಕೆಯನ್ನು ತೀರಿಸುತ್ತಾರೆ. ಹುಲಿಯ ವೇಷ ತೊಟ್ಟವರು ಊರಿನ ಪ್ರಮುಖ ರಸ್ತೆಗಳಲ್ಲಿ, ಓಣಿಗಳಲ್ಲಿ ಹುಲಿಯ ನೆಗೆತದಿಂದ ಭಿಕ್ಷೆ ಬೇಡುತ್ತಾ ಸಾಗುತ್ತಾರೆ. ಮೊಹರಂ ಹಬ್ಬದ ವಿಶಿಷ್ಟ ಆಚರಣಾ ಪದ್ಧತಿಗಳಲ್ಲಿ ಹುಲಿವೇಷಗಾರರ ಪದ್ಧತಿಯೂ ಒಂದಾಗಿದೆ.

**ಸಂದಲ ರಾತ್ರಿ, ಖತಲ್ ರಾತ್ರಿ ಹಾಗೂ ಶಹದತ್**

ಕುದರಿ ಮೋತಿ ಮೊಹರಂ ಹಬ್ಬದ ಆಚರಣೆಯಲ್ಲಿನ ಎಂಟನೆಯ ದಿನ ಜರುಗುವ ಕಾರ್ಯಕ್ರಮಕ್ಕೆ ಸಂದಲ್ ರಾತ್ರಿ ಎಂದು ಕರೆಯುತ್ತಾರೆ. ಸಂದಲ್ ಕೀ ರಾತ್ ಎಂದು ಕರೆಯಲ್ಪಡುವ ಈ

ಸಂದಲ್ ರಾತ್ರಿ ಎಂದರೆ ಗಂಧದ ರಾತ್ರಿ ಎಂದರ್ಥ. ಗ್ರಾಮೀಣ ಭಾಷೆಯಲ್ಲಿ ಏಳು ದಿನದ ಸವಾರಿ, ಚಂದಪ್ಪನ ಸವಾರಿಯೆಂತಲೂ ಕರೆಯುತ್ತಾರೆ. ಈ ದಿನ ರಾತ್ರಿಯಿಡೀ ಫಕೀರರಾದವರು ಇತರೆಲ್ಲ ಭಕ್ತರು ಸೇರಿ 'ಚಂದಪ್ಪನ ಸವಾರಿ' ಎಂದು ಕರೆಯಲ್ಪಡುವ ಮೆರವಣಿಗೆಯಲ್ಲಿ ಭಾಗವಹಿಸುತ್ತಾರೆ.

ಈ ಮೆರವಣಿಗೆಯು ತಾಶಾ, ಹಲಗೆ, ಡೋಲು ಹಾಗೂ ವಾದ್ಯ ಮೇಳಗಳಿಂದ ಕೂಡಿರುತ್ತದೆ. ಆರಂಭದಲ್ಲಿ ಚಂದಪ್ಪನ ಸವಾರಿಯ ಕುದುರೆ ಅಲಾವಿ (ಕುಣಿ) ಯನ್ನು ಸುತ್ತು ಹಾಕುತ್ತದೆ. ಅದರ ಹಿಂದೆ ಭಕ್ತರೂ ತಾವು ಮನೆಯಿಂದ ತಂದಂತಹ ಕಟ್ಟಿಗೆ, ಬೆಲ್ಲ ತಂದು ಅಲಾವಿಯ ಸುತ್ತ ಎರಡು ಬಾರಿ ಪ್ರದಕ್ಷಿಣೆ ಹಾಕಿ ಅಲಾವಿಗೆ ಕಟ್ಟಿಗೆ ಹಾಕುವರು. ತಂದಂತಹ ಬೆಲ್ಲ ಮತ್ತು ಸಕ್ಕರೆ ಮುಲ್ಲಾನ ಕೈಗೆ ಕೊಟ್ಟು ಫಾತೇಹ ಓದಿಸಿ ಲೋಬಾನ್ ಹಾಕಿ ಹೊಗೆ ಏರಿಸುವರು. ನಂತರದಲ್ಲಿ ಚಂದಪ್ಪನ ಸವಾರಿ ರಸ್ತೆಯುದ್ದಕ್ಕೂ ಸಂಚರಿಸಿ ಹನುಮಂತದೇವರ ಗುಡಿ, ದ್ಯಾಮವ್ವನ ಗುಡಿ ಅಗಸಿ, ಈಶ್ವರನ ದೇವಸ್ಥಾನ, ನಡುಕಲ್ ಮಸೂತಿ ಮಾರ್ಗವಾಗಿ  ತೆರಳಿ ಬೆಳಗಿನ ಜಾವ ಕಂದನಕೇರಿ ಮಸೀದೆಯನ್ನು ಪ್ರವೇಶಿಸುತ್ತದೆ. ಇದೇ ರೀತಿ ಒಂಭತ್ತನೆಯ ದಿನ ಖತ್ತಲ್ ರಾತ್ರಿಯಂದು  ಮಧ್ಯರಾತ್ರಿ ಸುಮಾರು 4 ಗಂಟೆಯ ನಂತರ ವಿಜೃಂಭಣೆಯಿಂದ ಹಜರತ್ ಹುಸೇನ್ ಆಲಂ ಸವಾರಿ ಜರುಗುತ್ತದೆ. ಹತ್ತನೆಯ ದಿನದಲ್ಲಿ ನಡೆಯುವ ಶಹದತ್ (ದೇವರು ಹೊಳೆಗೆ ಹೋಗುವ) ಕಾರ್ಯಕ್ರಮವು ಅಸಂಖ್ಯಾತ ಭಕ್ತರ ಸಮ್ಮುಖದಲ್ಲಿ ಜರುಗುತ್ತದೆ. ಇವೆಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಊರಿನ ಜನರು, ಭಕ್ತರು, ಅಲೆಮಾರಿಗಳು ಭಾಗವಹಿಸಿ ಪುಳಕಿತರಾಗುತ್ತಾರೆ.

**ಕಟ್ಟೆಮನೆಯಾಗಿ ಕುದರಿಮೋತಿ**

ಅಲೆಮಾರಿಗಳು ತಮ್ಮಲ್ಲಿಯೇ ನ್ಯಾಯಪದ್ಧತಿ ವ್ಯವಸ್ಥೆ ಹೊಂದಿದ್ದಾರೆ. ತಪ್ಪು ದಂಡದ, ದೈಹಿಕ ಶಿಕ್ಷೆಯ ಮೂಲಕ ತಪ್ಪಿತಸ್ಥನಿಗೆ ಶಿಕ್ಷೆ ವಿಧಿಸಲಾಗುತ್ತದೆ. ಸಾಮಾಜಿಕ ಬಂಧ ಮೀರಿದವರಿಗೆ ಉಗ್ರಕ್ರಮ ಕೈಗೊಳ್ಳಲಾಗುತ್ತದೆ. ಸಮಾಜದ ಎಲ್ಲ ವ್ಯವಹಾರಗಳು ಹಟ್ಟಿಯ ಮುಖಂಡ ಅಥವಾ ನಾಯಕನ ಮೂಲಕ ನಡೆಯುತ್ತವೆ. ಪ್ರತಿಯೊಬ್ಬರಿಗೂ ನ್ಯಾಯವನ್ನು ದೊರಕಿಸಿಕೊಡಲು ಪಂಚಾಯಿತಿ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಪಂಚಾಯಿತಿ ರಚನೆಯಲ್ಲಿ ವಿವಿಧ ಮುಖಂಡರುಗಳನ್ನು ನಾಯಕರನ್ನು ನೇಮಿಸಿಕೊಂಡಿರುತ್ತಾರೆ.

ಕಟ್ಟೆಮನೆ ಎಂದರೆ ನ್ಯಾಯದ ಮನೆ. ಸತ್ಯ ಶೋಧಿಸುವ ಮನೆ. ಕುಲದ ಕಟ್ಟಳೆಗಳನ್ನು ಮೀರಿ ನಡೆಯುವವರಿಗೆ ತಡೆಗೋಡೆ ಹಾಕಿ, ನ್ಯಾಯ ಮಾರ್ಗದಲ್ಲಿ ಪರಿಶುದ್ಧರಾಗಿ ನಡೆಯುವಂತೆ ತಿಳುವಳಿಕೆ ನೀಡುವ ತಾಣ. ಕುಲದ ಅಥವಾ ಕುಟುಂಬಗಳಲ್ಲಿ ನಡೆಯುವ ಜಗಳಗಳನ್ನು ತಮ್ಮ ತಮ್ಮೊಳಗೆ ಕಟ್ಟೆಮನೆಯಲ್ಲಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಲಾಗುತ್ತದೆ.

ಅಲೆಮಾರಿಗಳು ಮುಖಂಡರ ನಾಯಕತ್ವದಲ್ಲಿ ಮತ್ತು ಮಧ್ಯಸ್ಥಿಕೆಯಲ್ಲಿ ಸಾಮಾನ್ಯವಾಗಿ ಎಲ್ಲ ರೀತಿಯ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಆದರೆ ಕೆಲವು ಜಟಿಲ ಹಾಗೂ ಸಮಸ್ಯಾತ್ಮಕ ತೀರ್ಮಾನಗಳು ಅಂತಿಮವಾಗಿ ಕಟ್ಟೆಮನೆಯಲ್ಲಿ ಪರಿಹಾರ ಕಂಡುಕೊಳ್ಳುತ್ತವೆ. ಕಟ್ಟೆಮನೆ ತೀರ್ಮಾನವೇ ಅವರಿಗೆ ಹೈಕೋರ್ಟು, ಸುಪ್ರೀಂಕೋರ್ಟು ತೀರ್ಮಾನಗಳಿದ್ದಂತೆ. ಕಟ್ಟೆಮನೆ ತೀರ್ಮಾನವೆಂದರೆ

ಅಲೆಮಾರಿಗಳು ತಾವು ನಂಬಿರುವ ದೇವ–ದೇವತಾರಾಧನೆಯ ಸ್ಥಳಗಳು. ಅವರ ನಂಬಿಕೆಯ ಧಾರ್ಮಿಕ ಸ್ಥಳಗಳಲ್ಲಿ ಪ್ರಮಾಣೀಕರಿಸುವುದರ ಮೂಲಕ ವಾದಿ–ಪ್ರತಿವಾದಿಗಳಲ್ಲಿ ಯಾರು ತಪ್ಪಿತಸ್ಥ ಎಂದು ಮುಖಂಡರು ತೀರ್ಮಾನಿಸುತ್ತಾರೆ. ಅಂತಹ ಕಟ್ಟೆಮನೆಗಳು ಕರ್ನಾಟಕದಲ್ಲಿಯೂ ಬಹಳಷ್ಟು ಇದ್ದು, ಅವುಗಳಲ್ಲಿ ಕುದರಿಮೋತಿಯೂ ಒಂದಾಗಿದೆ. ಕುದರಿಮೋತಿಯ ಮೊಹರಂ ಸಂದರ್ಭದಲ್ಲಿ ಅಲೆಮಾರಿಗಳ ಮುಖಂಡರು ವಾದಿ–ಪ್ರತಿವಾದಿಗಳನ್ನು ಕರೆಸಿ, ಹಜರತ್ ಆಲಂ ಹುಸೇನ್ ದೇವರ ಸಮ್ಮುಖದಲ್ಲಿ ಪರಿಶೀಲಿಸಿದಾಗ ವಾದಿ–ಪ್ರತಿವಾದಿಗಳು ಹೆದರಿಕೊಂಡು ಸತ್ಯವನ್ನು ನುಡಿಯುತ್ತಾರೆ. ಆಗ ಸತ್ಯ ತಂತಾನೇ ಹೊರಬಂದು ತಪ್ಪಿತಸ್ಥನಿಗೆ ಶಿಕ್ಷೆಯಾಗುತ್ತದೆ. ಇಂತಹ ಎಷ್ಟೋ ಸಮಸ್ಯೆಗಳಿಗೆ ಅಲೆಮಾರಿಗಳು ಕುದರಿಮೋತಿ ಮೊಹರಂ ಸಂದರ್ಭದಲ್ಲಿಯೇ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ.

ಕೊಪ್ಪಳ, ಯಲಬುರ್ಗಾ, ಕುಷ್ಟಗಿ, ಗಂಗಾವತಿ ಹೀಗೆ ಕೊಪ್ಪಳ ಜಿಲ್ಲೆಯ ಬಹುತೇಕ ಎಲ್ಲ ತಾಲೂಕಿನ ಗ್ರಾಮ, ಪಟ್ಟಣ, ನಗರಗಳಲ್ಲಿಯೂ ಮೊಹರಂ ಹಬ್ಬವನ್ನು ವಿಶಿಷ್ಟವಾಗಿ, ಭಾವೈಕ್ಯತೆಯ ಉತ್ಸವವಾಗಿ ಆಚರಿಸಲಾಗುತ್ತಿದೆ. ಅದರಲ್ಲೂ ಕೊಪ್ಪಳ ಜಿಲ್ಲೆಯಲ್ಲಿ ಕುದರಿಮೋತಿಯ ಮೊಹರಂ ಆಚರಣೆ ಸುಪ್ರಸಿದ್ಧವಾಗಿವೆ. ಕುದರಿಮೋತಿಯ ಮೊಹರಂ ಆಚರಣೆಗೆ ಬಹಳಷ್ಟು ಹಳೆಯ ಇತಿಹಾಸವಿದೆ. ಇಲ್ಲಿನ ಮೊಹರಂ ಆಚರಣೆ ದೇಶ ಪ್ರಸಿದ್ಧತೆಯನ್ನು ಪಡೆದಿದೆ. ಮೊಹರಂ ಹಬ್ಬದ ನಿಮಿತ್ಯಕ್ಕೆಂದೇ ದೇಶದ ಮೂಲೆ–ಮೂಲೆಗಳ ಜನರು ಇಲ್ಲಿಗೆ ಬರುತ್ತಾರೆ. ಅದರಲ್ಲೂ ಪ್ರತಿ ಎರಡು ವರ್ಷಗಳಿಗೊಮ್ಮೆ ಬರುವ ಅಲೆಮಾರಿ ಜನಾಂಗದ ಜನತೆ ಇಲ್ಲಿ ಒಂದು ಊರನ್ನೇ ಸೃಷ್ಟಿ ಮಾಡುವಷ್ಟು ಜನಸಾಗರದಿಂದ ಬರುತ್ತದೆ. ಇಲ್ಲಿ ತಮ್ಮದೇ ಆದ ವಿಶಿಷ್ಟ ಪರಂಪರೆ, ಸಂಪ್ರದಾಯ, ಆಚರಣೆಗಳನ್ನು ಮುಗಿಸಿಕೊಂಡು ಎಂದಿನಂತೆ ತಮ್ಮ ಮುಂದಿನ ಅಲೆಮಾರಿ ಜೀವನಕ್ಕೆ ಸಾಗಹಾಕುತ್ತಾರೆ.

**ಉಪಸಂಹಾರ**

ಒಟ್ಟಿನಲ್ಲಿ ಕುದರಿಮೋತಿಯಲ್ಲಿ ನಡೆಯುವ ಭಾವೈಕ್ಯತೆ ಸಂಕೇತವಾಗಿರುವ ಮೊಹರಂ ಹಬ್ಬವನ್ನು ಕಣ್ಣಿಂದ ನೋಡುವುದೇ ಸಡಗರ. ಈ ಸಮಯದಲ್ಲಿ ಇತ್ಯರ್ಥವಾಗುವ ಜಗಳಗಳು, ವ್ಯಾಜ್ಯಗಳು, ವೈವಾಹಿಕ ಸಂಬಂಧಗಳು, ವ್ಯವಹಾರ ಮೊದಲಾದವುಗಳನ್ನು ಗಮನಿಸಿದರೆ ಇದೊಂದು ಅದ್ಭುತವಾದ ಆಚರಣೆ. ಮೊಹರಂ ಹಬ್ಬವನ್ನು ಕುದರಿಮೋತಿ ನೆಲದಲ್ಲಿ ಆಚರಿಸುವುದನ್ನು ಅದೊಂದು ಪವಿತ್ರ ಸ್ಥಳವೆಂದು ತಿಳಿದುಕೊಂಡಿದ್ದಾರೆ. ಅಲ್ಲಮಪ್ರಭುವಿನ ವಚನದಂತೆ ಎತ್ತಣಿಂದೆತ್ತ ಸಂಬಂಧವಯ್ಯ ಎನ್ನುವ ಹಾಗೆ ಕುದರಿಮೋತಿಯಲ್ಲಿ ನಡೆಯುವ ಮೊಹರಂ ಹಬ್ಬಕ್ಕೂ ಅಲೆಮಾರಿ ಜನಾಂಗದ ವ್ಯಾಜ್ಯ, ಜಗಳ, ವ್ಯವಹಾರ, ಮದುವೆ, ಸಂಪ್ರದಾಯಗಳ ಆಚರಣೆಗೂ ಎತ್ತಣಿಂದೆತ್ತ ಸಂಬಂಧ ಎನ್ನುವುದು ಒಂದು ಪ್ರಶ್ನೆಯಾಗುತ್ತದೆಯಲ್ಲದೇ ಇವರ ಸಂಪ್ರದಾಯಗಳ ಆಚರಣೆಯ ಬಗ್ಗೆ ಕುತೂಹಲ, ಆಸಕ್ತಿ ಉಂಟಾಗುತ್ತದೆ. ಹೀಗೆ ಅಲೆಮಾರಿಗಳು ತಮ್ಮ ನಂಬಿಕೆ, ಆಚರಣೆ, ಸಂಪ್ರದಾಯಗಳ ಪ್ರಕಾರ ತಮಗೆ ಅತ್ಯಂತ ಪವಿತ್ರ ಸ್ಥಳವಾಗಿರುವ ಕೊಪ್ಪಳ ಜಿಲ್ಲೆಯ ಕುದರಿಮೋತಿ ಗ್ರಾಮ. ಇದನ್ನು ಭಕ್ತಿ ಭಾವದ, ಪವಿತ್ರ ಸ್ಥಳವನ್ನಾಗಿ ಒಪ್ಪಿಕೊಂಡಿದ್ದಾರೆ. ತಮ್ಮ ಎಲ್ಲ ಸಮಸ್ಯೆಗಳಿಗೆ ಪರಿಹಾರಗಳನ್ನು ಕುದರಿಮೋತಿ ಮೊಹರಂ ಹಬ್ಬದ ಸಂದರ್ಭದಲ್ಲಿ ಕಂಡುಕೊಳ್ಳುತ್ತಾರೆ. ಹೀಗೆ ಕುದರಿಮೋತಿ ಮೊಹರಂ ಹಬ್ಬವು ಕೇವಲ ದೇವರ

ಆರಾಧನೆಯ ಸ್ಥಳ ಮತ್ತು ಹಬ್ಬವಾಗಿರದೇ ಅಲೆಮಾರಿಗಳ ಸಂಸ್ಕೃತಿ, ಜೀವನ ಪದ್ಧತಿ, ಬದುಕಿನ ವಿವಿಧ ಮಜಲುಗಳನ್ನು ಹೊರ ಜಗತ್ತಿಗೆ ತಿಳಿಸಿಕೊಡುವ ವಿಶಿಷ್ಟ ಹಬ್ಬವಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಲ್ಲೀಬಾಯಿ, ದಸ್ತಗೀರ್. (1984). ಮೋಹರಂ ಪದಗಳು. ಐಬಿಎಚ್ ಪ್ರಕಾಶನ, ಬೆಂಗಳೂರು.
- ಬೇಗಂ, ಷಹಸೀನಾ. (2000). ಕರ್ನಾಟಕ ಮುಸ್ಲಿಂ ಜಾನಪದ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
- ಬೀಳಗಿ, ಹಸನಬಿ. (2000). ಜಾನಪದ ಸೃಷ್ಟಿ–ದೃಷ್ಟಿ, ಸಾಯಿ ಪ್ರಕಾಶನ, ಧಾರವಾಡ.
- ಚೆನ್ನಣ್ಣ ವಾಲೀಕರ. (1983). ಕಲಬುರ್ಗಿ ಜಿಲ್ಲೆಯ ಮೊಹರಂ ಪದಗಳು. ಪ್ರಸಾರಾಂಗ, ಮೈಸೂರು ವಿವಿ, ಮೈಸೂರು.
- ಗೀತಾ ನಾಗಭೂಷಣ (1993). ದುರಮುರಗಿಯ ಸಂಸ್ಕೃತಿ. ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಜವರೇಗೌಡ ದೇ. (2001). ಜಾನಪದ ಅಧ್ಯಯನ. (ಮೂರನೇ ಮುದ್ರಣ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
- ಖಂಡೋಬ ಪಿ.ಕೆ. (1993). ಸುಡುಗಾಡು ಸಿದ್ಧರ ಸಂಸ್ಕೃತಿ. ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಪಾಟೀಲ ಬಿ ಸಿ. (1998). ಕೊಪ್ಪಳ ಸಾಂಸ್ಕೃತಿಕ ಪರಂಪರೆ. ಹರಿಹರ ಪ್ರಕಾಶನ, ಕೊಪ್ಪಳ.
- ಪ್ರಹ್ಲಾದ್ ಬೆಟಗೇರಿ. (1993). ಅಡವಿಚೆಂಚರ ಸಂಸ್ಕೃತಿ. ಉಪಸಂಸ್ಕೃತಿ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
- ಪ್ರಕಾಶ್ ಬಳ್ಳಾರಿ (2012). ಕುದರಿಮೋತಿ ಮೋಹರಂ ಆಚರಣೆ ಮತ್ತು ಅಲೆಮಾರಿ ಜನಾಂಗಗಳು : ಒಂದು ಅಧ್ಯಯನ, ಅಂತರಂಗ ಧ್ವನಿ ಪ್ರಕಾಶನ, ಕೊಪ್ಪಳ.
- ರಹಮತ್ ತರೀಕೆರೆ. (1998). ಕರ್ನಾಟಕದ ಸೂಫಿಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶಿವಾನಂದ ಲ. ವಾಚಂಗಿ. (2008). ಗೋಂದಳಿ. ಉಪಸಂಸ್ಕೃತಿ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.